ಗುರುಭಕ್ತಿಯ ಮಹತ್ತ್ವ

ಸ್ವಾಮಿ ಶಿವಕಾಂತಾನಂದ

ಭಾರತದ ಎಲ್ಲ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಆಧ್ಯಾತ್ಮಿಕ ಕ್ಷೇತ್ರಗಳಲ್ಲೂ ಗುರು-ಶಿಷ್ಯರ ಪರಂಪರೆಗೆ ಅತಿಹೆಚ್ಚಿನ ಮಹತ್ವವಿದೆ. ಆಧುನಿಕ ಯುಗದಲ್ಲೂ ಈ ಮೌಲ್ಯವನ್ನು ಮುಂದುವರಿಸುವುದು ನಮ್ಮ ಉನ್ನತಿಗೆ ಅತ್ಯಗತ್ಯವಾಗಿದೆ. ಶ್ರೇಷ್ಠ ಮೌಲ್ಯ, ಆದರ್ಶಗಳು ಕುಸಿಯುತ್ತಿರುವ ಈ ಕಾಲಘಟ್ಟದಲ್ಲಿ, 'ಗುರುಪೂರ್ಣಿಮೆ'ಯ ಮಹತ್ವವೇನೆಂಬುದನ್ನು ನಾವೆಲ್ಲ ಅರಿತುಕೊಳ್ಳುವುದೇ ಮೊದಲ ಹೆಜ್ಜೆ. ಈ ಕುರಿತು ಇಲ್ಲಿ ಬರೆದಿರುವ ಲೇಖಕರು ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಸಂಚಾಲಕರಾಗಿದ್ದಾರೆ. ಅವರು ಉತ್ತಮ ವಾಗ್ಮಿ ಹಾಗೂ ಬರಹಗಾರರು.



ಗುರುವು ಗುರಿಯನ್ನು ಸೇರಿಸುವ ಕೊಂಡಿ. ಗುರು ಭಗವಂತನೆಂಬ ದಡವನ್ನು ಸೇರಿಸುವ ಸಂಸಾರ ಸಾಗರದ ಅಂಬಿಗ. ಗುರುವಿನ ಮೇಲಿನ ಭಕ್ತಿಯು ಮಹಾತ್ಮರ ಜೀವನದಲ್ಲಿ ಭಗವಂತನ ಮೇಲಿನ ಭಕ್ತಿಗಿಂತಲೂ ಒಂದು ತೂಕ ಹೆಚ್ಚೇ ಇರುತ್ತದೆ. ಗುರುವಿನ ಕೃಪೆಯಿಲ್ಲದೆ ಗುರಿ ಮುಟ್ಟಲಾಗದು. ಆದ್ದರಿಂದ ಸಾಧಕಾವಸ್ಥೆಯಲ್ಲಿ ಗುರುಭಕ್ತಿಗೇ ಹೆಚ್ಚು ಮಹತ್ವ. ಸಮರ್ಥ ಗುರುವಿನ ಮೇಲಿನ ಭಕ್ತಿಯಿಂದ ಸಂಸಾರ ಚಕ್ರದಿಂದ ಪಾರಾದ ಅನೇಕ ಮಹಾತ್ಮರ ಜೀವನ ಘಟನೆಗಳು ಗುರುವಿನ ಮೇಲಿನ ಶ್ರದ್ಧೆಯನ್ನು, ಭಕ್ತಿಯನ್ನು ಇಮ್ಮಡಿಗೊಳಿಸುತ್ತವೆ. ದೇವನ ಮೇಲಿರುವ ಭಕ್ತಿಯಷ್ಟೇ ಗುರುವಿನ ಮೇಲಿರಬೇಕೆಂದು ಶಾಸ್ತ್ರವು ಆದೇಶಿಸುತ್ತದೆ.

ಯಸ್ಯ ದೇವೇ ಪರಾಭಕ್ತಿರ್ಯಥಾ ದೇವೇ ತಥಾ ಗುರೌ ।
ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥

(ಶ್ವೇತಾಶ್ವತರೋಪನಿಷತ್ತು ೬.೨೩)

'ಇಷ್ಟದೇವತೆಯ ಮೇಲಿರುವ ಪರಾಭಕ್ತಿಯಷ್ಟೇ ಗುರುವಿನ ಮೇಲೂ ಭಕ್ತಿಯಿರುವ ಮಹಾತ್ಮನಿಗೆ ಅರ್ಥಗಳು ಪ್ರಕಾಶವಾಗುವುವು' ಎನ್ನುತ್ತದೆ ಮೇಲಿನ ಉಪನಿಷತ್ತು.

ಸಂಸಾರವೆಂಬ ಸುಖದ ಮರೀಚಿಕೆಯ ಹಿಂದೆ ಓಡಿ ಬೆಂದು ಬಳಲಿದ ಜೀವನು ನಿತ್ಯಾನಿತ್ಯವಸ್ತು ವಿವೇಚನೆಯ ಮೂಲಕ ಇಂದ್ರಿಯ ಮನಗಳನ್ನು ಒಳಸೆಳೆದು ಶಾಶ್ವತವಾದ ಸುಖವನ್ನರಸುತ್ತಾ ತನ್ನದೇ ಆದ ರೀತಿಯಲ್ಲಿ ಸಾಧನೆಯಲ್ಲಿ ತೊಡಗಿರುತ್ತಾನೆ. ಎಂತಹ ದೃಢ ಸ್ವಪ್ರಯತ್ನಶೀಲನಾಗಿದ್ದರೂ ಸಶರೀರಿಯಾದ, ತನ್ನನ್ನು ಕೈ ಹಿಡಿದು ಮುನ್ನಡೆಸುವ, ತಾನು ಆರಿಸಿಕೊಂಡ ಇಷ್ಟಪಡುವ ಮಾರ್ಗದಲ್ಲಿಯೇ ಗುರಿ ಸೇರಿರುವ ಒಬ್ಬ ಪರಿಪೂರ್ಣ ವ್ಯಕ್ತಿಯನ್ನು ಮಾರ್ಗದರ್ಶಕನನ್ನಾಗಿ ಪಡೆಯಲು ಹಂಬಲಿಸುತ್ತಾನೆ. ಗುರುವೇ ತನ್ನ ಬಳಿ ಸಾರಿ ''ನನ್ನ ಹಿಂದೆ ಬಾ'' ಎಂದೋ, ಕನಸಿನಲ್ಲಾದರೂ ದರ್ಶನ ನೀಡಿ ''ನನ್ನ ಬಳಿ ಬಾ'' ಎಂದು ಕೈಬೀಸಿ ಕರೆಯಬಹುದೆಂಬ ತುಡಿತದಿಂದ ಹಿಡಿದು ಸದ್ಗುರುವಿನ ಪ್ರಾಪ್ತಿಯಲ್ಲಿ ಅವಸಾನವಾಗುವುದೊಂದು ಪ್ರಾಪ್ತಿ, ಅದೃಷ್ಟ ಪರೀಕ್ಷೆಯೇ ಸರಿ. ವಿಶೇಷವೆಂದರೆ ಗುರುವೂ ಸಹ ಅವನಿಗಾಗಿ ಹಗಲಿರುಳೂ ಕಾಯುತ್ತಿರುತ್ತಾನೆ. ಇದನ್ನು ರಾಮಕೃಷ್ಣ-ಸ್ವಾಮಿ ವಿವೇಕಾನಂದರ ಜೀವನದಲ್ಲಿ ಸ್ಪಷ್ಟವಾಗಿ ನೋಡುತ್ತೇವೆ. ಶ್ರೋತ್ರಿಯನೂ, ಪಾಪರಹಿತನೂ, ಕಾಮದ ಹೊಡೆತವಿಲ್ಲದವನೂ, ಬ್ರಹ್ಮವಿದರಲ್ಲಿ ಶ್ರೇಷ್ಠನೂ ಆದ ಗುರುವಿನ ಪ್ರಾಪ್ತಿಯಾಗಬೇಕು. ಅವನನ್ನು ತನ್ನ ಪಾಲಿನ ಮಾಂಸಲ ತುಂಬಿದ ದೇವತೆ ಎಂದು ಭಾವಿಸಿ ಸೇವೆ, ಶುಶ್ರೂಷೆ, ನಮ್ರತೆ, ವಿನಯ ವರ್ತನೆಯಿಂದ ಅವನನ್ನು ಸಂತೋಷಪಡಿಸುತ್ತಾ ವಸ್ತುಲಾಭವನ್ನುಳಿದು ಬೇರೇನನ್ನೂ ಬಯಸದೆ ಅನೇಕ ವರ್ಷ ಅವನ ಬಳಿ ಇರಬೇಕು. ಗುರುವು ಶಿಷ್ಯನಿಂದ ಸೇವೆ ಬಯಸುವನೆ? ಖಂಡಿತ ಇಲ್ಲ. ಅನೇಕ ಜನ್ಮಗಳ ಸುಕೃತದಿಂದ ಪ್ರಾಪ್ತವಾದ ಗುರುಲಾಭ, ಅನೇಕ ವಿಘ್ನ-ವಿಪತ್ತುಗಳ ನಡುವೆಯೂ ಕಲ್ಯಾಣಮಾರ್ಗದಲ್ಲಿ ಕೊಂಡೊಯ್ಯುತ್ತದೆ. ಗುರುವು ಭಯಂಕರವಾದ ಸಂಸಾರ ಸಾಗರವನ್ನು ತಮ್ಮ ಪರಂಪರೆಯ ಗುರುವಿನ ಕೃಪೆಯಿಂದ ಹೊಂದಿದ ನಂತರ, ವಸಂತ ಋತುವಿನಂತೆ ಲೋಕಕಲ್ಯಾಣ ಮಾಡಲೋಸುಗ ತಮ್ಮ ಶರೀರ ಯಾತ್ರೆಯನ್ನು ಮುಂದುವರೆಸುತ್ತಿರುತ್ತಾರೆ. ಇತರರ ಶ್ರಮ ಪರಿಹಾರ ಇವರ ಸ್ವಭಾವ. ಬೇಸಿಗೆ ಸೂರ್ಯನಿಂದ ಬಳಲಿ ಬೆಂದಿರುವ ಭೂಮಿಗೆ ರಾತ್ರಿ ಹುಣ್ಣಿಮೆಯ ಚಂದಿರನು ಆಹ್ಲಾದಕರವಾದ ಬೆಳಕನ್ನು ಚೆಲ್ಲುತ್ತಾ ತಂಪಾಗಿಸುವ ಹಾಗೆ, ತಮ್ಮ ಬ್ರಹ್ಮಾನಂದ ರಸಸುಧೆಯ ಜ್ಯೋತ್ಸ್ನೆಯನ್ನು ಕಾಮಧೇನುವಿನಂತೆ ಸೂಸಿ ಸಂಸಾರವೆಂಬ ಸುಡು ಬೇಗೆಯನ್ನು

ನೀಗಿಸುತ್ತಾರೆ. ಗುರುವಿನ ಬಳಿಗೆ ಸಾರಿದ ಶಿಷ್ಯನನ್ನು ಪರೀಕ್ಷಿಸಿ, ಪ್ರಸನ್ನನಾದ ನಂತರ ಅಭಯವನ್ನು ನೀಡುತ್ತಾನೆ. ಶ್ರದ್ಧಾ-ಭಕ್ತಿಯುಳ್ಳ ಮುಮುಕ್ಷುವಾದ ಶಿಷ್ಯನಿಗೆ ಶ್ರವಣ-ಮನನ-ನಿದಿಧ್ಯಾಸನಗಳ ಮೂಲಕ ಮೋಕ್ಷೋಪಾಯಗಳೆಂಬ ರಹಸ್ಯವಿದ್ಯೆಗಳನ್ನು ಬೋಧಿಸುತ್ತಾನೆ. ಪರಮಾತ್ಮನ ಸ್ವರೂಪವೇ ನೀನೆಂಬ ಸ್ವರೂಪ ಬೋಧನೆಯಿಂದ ಗುರು-ಶಿಷ್ಯರ ಮಧ್ಯೆ ಉಂಟಾದ ಜ್ಞಾನಾಗ್ನಿಯು ಶಿಷ್ಯನ ಅವಿದ್ಯಾಕಾರ್ಯವಾದ ಸಂಸಾರವೃಕ್ಷವನ್ನು ಬೇರುಸಹಿತ ಸುಟ್ಟುಹಾಕಿಬಿಡುತ್ತದೆ. ಜನಕನು ಉಪದೇಶಕ್ಕೆ ಮುಂಚೆಯೇ ಗುರುದಕ್ಷಿಣೆಯನ್ನು ಕೇಳುತ್ತಾನೆ. ಏಕೆಂದರೆ ಜ್ಞಾನಪ್ರಾಪ್ತಿಯ ನಂತರ ಗುರು-ಶಿಷ್ಯರ ನಡುವಿರುವ ಅಂತರ ಬೋಧೆಯು ನಾಶವಾಗಿರುತ್ತದೆ.

ಗುರುವನ್ನು ಇಷ್ಟೊಂದು ಹೊಗಳಿ ಅಟ್ಟಕ್ಕೇರಿಸಿ ಸೇವೆ ಮಾಡಬೇಕೆ? ನಮಗೆ ನಾವೇ ಮಾರ್ಗದರ್ಶಕರಾಗಿಯೋ, ಪುಸ್ತಕಗಳನ್ನು ಓದಿಯೋ, ಅಥವಾ ಈಗಿನ ಕಾಲದಲ್ಲಿ ಇಂಟರ್ನೆಟ್ ಶೋಧಿಸಿ ತಿಳಿದುಕೊಂಡು ಆತ್ಮದರ್ಶನ ಮಾಡಿಕೊಳ್ಳಲಾಗುವುದಿಲ್ಲವೆ? ಇದೆಲ್ಲಾ ಹಳೇ ಹಿಂದೂ ಸಂಪ್ರದಾಯದ ಗೊಡ್ಡು ಕಟ್ಟುಪಾಡುಗಳು; ಮನುಷ್ಯನ ಸ್ವಾತಂತ್ರ್ಯವನ್ನು, ಸೃಜನಶೀಲತೆಯನ್ನು ಕದಿಯುವ ವ್ಯವಸ್ಥೆಯೆಂದು ಈಗಿನ ಜನಾಂಗಕ್ಕೆ ಅನ್ನಿಸಬಹುದು. ಸ್ವಾಮಿ ಬ್ರಹ್ಮಾನಂದರು ತಿಳಿಸುತ್ತಾರೆ: ''ಒಂದು ಚೋರವಿದ್ಯೆಗೆ ಗುರುವು ಬೇಕೆಂದಲ್ಲಿ ಸೂಕ್ಷ್ಮವಾದ, ಮಾರ್ಗವೇ ತಿಳಿಯದ ಆತ್ಮವಿದ್ಯೆಗೆ, ಬ್ರಹ್ಮವಿದ್ಯೆಗೆ ಗುರುವಿನ ಜರೂರತ್ತು ಇಲ್ಲವೆ?'' ಇಲ್ಲಿಂದಿಲ್ಲಿಗೆ ಹೋಗಲು ನಮಗೆ ಮಾರ್ಗದರ್ಶಕರ ಆವಶ್ಯಕತೆಯಿಲ್ಲವೆ? ಉಪನಿಷತ್ತು ತಿಳಿಸುತ್ತದೆ, '**ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ**' *(ತೈತ್ತಿರೀಯೋಪನಿಷತ್ತು, ೨.೯)* ಯಾರು ಈ ದಾರಿಯನ್ನು ಅನೇಕ ಬಾರಿ ಹೋಗಿ ಬಂದು ಚೆನ್ನಾಗಿ ಬಲ್ಲವನೋ ಅವನಿಂದಲೇ ಕಲಿಯಬೇಕು. ಆದ್ದರಿಂದಲೇ ಅವತಾರಾದಿಗಳೂ ಗುರುವಿನ ಬಳಿಸಾರಿ ವಿದ್ಯೆಯನ್ನು ಕಲಿಯುವ ಒಂದು ಲೀಲಾನಾಟಕವನ್ನು ಮಾಡುತ್ತಾರೆ. ಶ್ರೀರಾಮನು ವಸಿಷ್ಠರ ಬಳಿ, ಶ್ರೀಕೃಷ್ಣನು ಸಾಂದೀಪಿನಿಯ ಬಳಿ, ಶ್ರೀರಾಮಕೃಷ್ಣರು ಕೇನಾರಾಮ ಭಟ್ಟಾಚಾರ್ಯನ ಬಳಿ, ಹೀಗೆ ಮುಂತಾದ ಉದಾಹರಣೆಯನ್ನು ನೀಡಬಹುದು. ಕೇನಾರಾಮ ಭಟ್ಟಾಚಾರ್ಯನು ಶಕ್ತಿಮಂತ್ರವನ್ನು ನೀಡಿದಾಕ್ಷಣ ಒಮ್ಮೆ ಮಂತ್ರವನ್ನು ಜೋರಾಗಿ ಉಚ್ಚರಿಸಿ ಶ್ರೀರಾಮಕೃಷ್ಣರು ಸಮಾಧಿಗೆ ಹೊರಟುಹೋದರು. ಅವನೇ ಹೇಳಿದಂತೆ, ''ಇಂತಹವರನ್ನು ನಾನು ಮೊದಲು ಎಲ್ಲಿಯೂ ನೋಡಿಲ್ಲ!'' ತೋತಾಪುರಿ, ಭೈರವೀ ಬ್ರಾಹ್ಮಣಿಯವರೂ ಸಹ ನಿಮಿತ್ತವಾಗಿ ಶ್ರೀರಾಮಕೃಷ್ಣರ ಗುರುವಾಗಿ ಬಂದು ಹೋದರು. ಅವರೂ ಸಹ ಶ್ರೀರಾಮಕೃಷ್ಣರಿಂದ ಕಲಿತು ಹೋಗಬೇಕಾಯಿತು.

ಆಧುನಿಕ ಮನಃಶಾಸ್ತ್ರವೂ ಸಹ ಕಲಿಕೆಯಲ್ಲಿ ಗುರುವಿನ ಪಾತ್ರವನ್ನು, ಸಶರೀರಿಯಾದ ಶಿಕ್ಷಕರ ಆವಶ್ಯಕತೆಯನ್ನು ದೃಢೀಕರಿಸುತ್ತದೆ. ಮಾನವ ಜೀವನದಲ್ಲಿ ಒಂದು ಮುಖ್ಯವಾದ ಅಂಶವೆಂದರೆ ಸಂಬಂಧ (ರಿಲೇಷನ್). ಮನುಷ್ಯನು ಬೇರೆಯವರ ಜೊತೆ ಒಂದು ವಿಶಿಷ್ಟವಾದ ಸಂಬಂಧವನ್ನು ಕಲ್ಪಿಸಿ ಅವರೊಡನೆ ಅರಿವು ಮತ್ತು ಭಾವನೆಗಳನ್ನು ವಿನಿಮಯಗೊಳಿಸಿಕೊಳ್ಳುತ್ತಾನೆ. ಮಾನವನ ಅನೇಕ ಸಂಬಂಧಗಳ ಮಧ್ಯೆ ವಿಶಿಷ್ಟವಾಗಿ ಕಂಗೊಳಿಸುವ ಒಂದು ಸಂಬಂಧ, ಗುರು-ಶಿಷ್ಯರ ಸಂಬಂಧ. ಮನುಷ್ಯನಲ್ಲಿ ಮುಖ್ಯವಾದುದು ತಲೆಯ ಮೇಲಿರುವ ಭಾರವಾದ ಮೆದುಳು. ಇದರಲ್ಲಿ ಅವ್ಯಕ್ತವಾದ ಜ್ಞಾನರಾಶಿಯೇ ಅಡಗಿದೆ. ಮೆದುಳಿನ ಮುಂಭಾಗದಲ್ಲಿರುವ pre frontal cortex, ಇದು ಹೆಚ್ಚು ಕಡಿಮೆ ಖಾಲಿ ಹಾಳೆಯಂತಿರುತ್ತದೆ. ಈ ಒಂದು ವಿಶೇಷತೆಯ ಕಾರಣದಿಂದ ಮಾನವನು ಪ್ರತಿಯೊಂದನ್ನೂ ನೋಡಿ, ತರಬೇತಿಯನ್ನು ಆಶ್ರಯಿಸಿ ಕಲಿಯುವ ಒಂದು ಅನಿವಾರ್ಯತೆಯನ್ನು ಉಂಟುಮಾಡುತ್ತದೆ. ಕಲಿತೂ, ಕಲಿತೂ ಕೊನೆಗೆ ಪ್ರತ್ಯಕ್ಷವನ್ನೂ ಪ್ರಮಾಣೀಕರಿಸುವ, ಅತೀಂದ್ರಿಯ ವಿಷಯಗಳನ್ನರಿಯುವುದಕ್ಕಾಗಿ ಹಂಬಲಿಸುವ, ಎಲ್ಲ ಸಾಮಗ್ರಿಗಳನ್ನು ಹೊಂದಿಸಿ, ಪ್ರಕೃತಿಯಲ್ಲಿ ಸಿಗುವ ವಸ್ತುಗಳನ್ನು ಸಂದರ್ಭವನ್ನು ದಕ್ಷವಾಗಿ ಬಳಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದವನಾಗುತ್ತಾನೆ ಮನುಷ್ಯನು ಅತಿಹೆಚ್ಚು ಆಶಾವಾದಿ. ಇತರ ಪ್ರಾಣಿಗಳಂತೆ ಜನ್ಮತಃ ಕಾರ್ಯ ಸಂಸ್ಕಾರವಿಲ್ಲ. ಒಂದು ರೀತಿಯಲ್ಲಿ ಎಲ್ಲವನ್ನೂ ಕಲಿಯಬೇಕು. ನಾಯಿ ಬೆಕ್ಕು ಮುಂತಾದ ಪ್ರಾಣಿಗಳು ಹುಟ್ಟಿದ ತಕ್ಷಣ ಕಾಲ ಮೇಲೆ ನಿಲ್ಲುತ್ತವೆ, ನೀರಿಗೆ ಎಸೆದರೆ ಈಜುತ್ತವೆ. ಮನುಷ್ಯನು ಎಲ್ಲವನ್ನೂ ಅನ್ಯರ ಸಹಾಯದಿಂದ, ಅನ್ಯರ ಅನುಸರಣೆಯಿಂದ, ಸ್ವಂತ ಅನುಭವದಿಂದಲೇ ಕಲಿಯಬೇಕಾಗುತ್ತದೆ. ಮಗುವಿನ ಮೊದಮೊದಲ ಹೆಜ್ಜೆಗಳು ಅಸ್ಪಷ್ಟವಾಗಿ, ಕ್ರಮವಿಲ್ಲದೆ ಇರುತ್ತವೆ. ಬೇರೆಯವರನ್ನು ನೋಡಿ, ನಾವೂ ಎಡವಿ ಅನೇಕ ವಿದ್ಯೆಗಳನ್ನು ಕಲಿಯುತ್ತೇವೆ. ಈ ರೀತಿ ಹುಟ್ಟಿನಿಂದ ಕಲಿಕೆಯ ಆವಶ್ಯಕತೆಯೇ ಕೊನೆಗೆ ಮಾನವನಿಗೆ ಜ್ಞಾನಾರ್ಜನೆಯ ಅನಿವಾರ್ಯತೆ ಮತ್ತು ಎಲ್ಲ ಪ್ರಾಣಿಗಳನ್ನು ಮೀರಿಸುವ ಯೋಗ್ಯತೆಯನ್ನು ದಯಪಾಲಿಸಿದೆ. ಈ ಕಲಿಕೆಯ ಜೀವನ ಶಾಲೆಯಲ್ಲಿ ತಾಯಿಯೇ ಮೊದಲ ಗುರು. ಅನಂತರ ಅನೇಕರು ನಮಗೆ ಕಲಿಕೆಯಲ್ಲಿ ಸಹಾಯ ಮಾಡುತ್ತಾರೆ. ಈ ಕಲಿಕೆಯ ಅನ್ಯಾವಲಂಬನೆಯ ಆವಶ್ಯಕತೆಯು ಪ್ರಾಪಂಚಿಕ ಮತ್ತು ಪಾರಮಾರ್ಥಿಕ ವಿಷಯಗಳಿಗೆ ಗುರುವಿನ ಆವಶ್ಯಕತೆಯನ್ನು ಸಂಶಯವಿಲ್ಲದೆ ಸಾಬೀತು ಮಾಡುತ್ತದೆ. ಮನುಷ್ಯನು ಅನ್ವೇಷಿಸುವುದು ಸುಖವನ್ನಲ್ಲ. ಸುಖವೇ ನಮ್ಮ ಗುರಿಯಾಗಿದ್ದರೆ, ನಮಗೆ ಏನು ದೊರೆತಿದೆಯೋ ಅದರಲ್ಲಿಯೇ ತೃಪ್ತರಾಗಿರಬೇಕಿತ್ತು. ಹಾಗಾಗಿಲ್ಲ. ಆದರೆ ಮನುಷ್ಯನು ಅಲ್ಪದರಲ್ಲಿ ತೃಪ್ತನಾಗಲಾರ. ಮಹದಾದ ವಿಷಯಗಳಲ್ಲಿ ಮಾತ್ರ ಅವನ ತೃಪ್ತಿ. '**ಯೋ ವೈ ಭೂಮಾ ತತ್ಸುಖಂ ನಾಲ್ಪೇ ಸುಖಮಸ್ತಿ, ಭೂಮಾ ತ್ವೇವ ವಿಜಿಜ್ಞಾಸಿತವ್ಯಃ**' *(ಛಾಂದೋಗ್ಯ, ೭.೨೩.೧).* ಆದ್ದರಿಂದ ಹೆಚ್ಚಿನದನ್ನು ಪಡೆಯಲು

ಗುರುವನ್ನು ಅರಸುತ್ತಾನೆ. ಗುರುವು ಶಿಷ್ಯನಿಗೆ ಭೂಮಸುಖ ವನ್ನು ಪಡೆಯಲು ಸಹಾಯ ಮಾಡುತ್ತಾನೆ.

ಶಿಕ್ಷಣವೆಂಬುದು ಸನಾತನಧರ್ಮದಲ್ಲಿ ಅತ್ಯಂತ ಪವಿತ್ರ ವಾದ ಕಾರ್ಯ. ಗುರು-ಶಿಷ್ಯ ಸಂಪ್ರದಾಯವು ಪರಂಪರ ವಿದ್ಯೆ ಗಳ ವ್ಯವಸ್ಥೆಯನ್ನು ಶತಮಾನ-ಶತಮಾನಗಳಿಂದ ಕಾಪಾಡುತ್ತ ಬಂದಿದೆ. ವೇದಾರಂಭ ಮಾಡಲು ಹೊರಟ ವಿದ್ಯಾರ್ಥಿಯು ಗುರುಕುಲದ ತೆಕ್ಕೆಯಲ್ಲಿ ಬಂದ ನಂತರ ಉಪನೀತನಾಗುತ್ತಾನೆ. ಅಂದರೆ ಕಲಿಕೆಯ ನಿಯಮಕ್ಕೆ ಒಳಪಡುತ್ತಾನೆ. ಅಪಾರವಾದ ವಿದ್ಯಾಸಾಗರಕ್ಕೆ ಪ್ರವೇಶ ಮಾಡುತ್ತಾನೆ. ಈ ಕಲಿಕೆ ಜೀವನದಲ್ಲಿ ಕೇವಲ ಪುಸ್ತಕ ಪಾಠವಲ್ಲದೆ, ಸರ್ವತೋಮುಖ ಬೆಳವಣಿಗೆ, ವೃತ್ತಿ ಪರತೆ, ಹೊಣೆಗಾರಿಕೆ, ವಿನಮ್ರತೆ, ಸಾಮಾಜಿಕ ಒಡಂಬಡಿಕೆ, ಗುರುಹಿರಿಯರ ಸೇವೆ, ಪ್ರಾಣಿ-ಪ್ರಕೃತಿಗಳೊಡನೆ ಸಾಮರಸ್ಯ ಗಳನ್ನು ಸಮಗ್ರವಾಗಿ ಒಳಗೊಂಡಿರುತ್ತದೆ. ವಿದ್ಯಾರ್ಜನೆ, ಸಮಾಜ ಸೇವೆ, ರಾಷ್ಟ್ರರಕ್ಷಣೆ, ಅತೀಂದ್ರಿಯ ಜ್ಞಾನಗಳ ಅರಿವಿನ ಹಂಬಲ ವನ್ನು ಮೂಡಿಸುವ ಸಮಗ್ರ ಶಿಕ್ಷಣವನ್ನು ಗುರುವು ನೀಡುತ್ತಾನೆ. ಕೇವಲ ಪಾಂಡಿತ್ಯವಲ್ಲದೆ ಸಂಪೂರ್ಣ ವ್ಯಕ್ತಿಯನ್ನು, ಸಮೃದ್ಧ ಜಗತ್ತನ್ನು ಬೆಳಗುವ ದೀವಟಿಗೆಗಳ ತಯಾರಿಕೆ ಗುರುಕುಲದಲ್ಲಿ ನಡೆಯುತ್ತದೆ. ಈ ರೀತಿಯ ವಾತಾವರಣದಲ್ಲಿ ಸುಮಾರು ೧೬ ವರ್ಷ ದೀರ್ಘಕಾಲದ ಕಲಿಕೆಯ ನಂತರ ಸ್ನಾತಕನೆನಸಿಕೊಂಡು, ಸಮಾವರ್ತನ ಸಂಸ್ಕಾರದ ನಂತರ ವ್ಯಕ್ತಿಯು ಸಮಾಜಕ್ಕೆ ಮರಳು ತ್ತಾನೆ. ಜೀವನದ ಬಾಲ್ಯ-ಯೌವನ ಘಟ್ಟದಲ್ಲಿ ತಂದೆ-ತಾಯಿ-ಗುರುವಾಗಿ ನಿಂತ ಗುರುವೆಂಬ ವ್ಯಕ್ತಿಯನ್ನು ಹೇಗೆ ತಾನೆ ಮರೆ ಯಲು ಸಾಧ್ಯ! ಹಲವರು ಗೃಹಸ್ಥಾಶ್ರಮಕ್ಕೆ ಮರಳಿದ ನಂತರ ಬೆರಳೆಣಿಕೆಯಷ್ಟು ಕೆಲವರು ಇಷ್ಟಕ್ಕೆ ತೃಪ್ತರಾಗದೆ ಇನ್ನಷ್ಟು ಜ್ಞಾನಾ ರ್ಜನೆಯನ್ನು ಸಂಪಾದಿಸಲು ಆಜೀವನ ಬ್ರಹ್ಮಚರ್ಯ ವ್ರತ ವನ್ನು ಕೈಗೊಂಡು ನೈಷ್ಠಿಕ ಬ್ರಹ್ಮಚರ್ಯವನ್ನು ಸ್ವೀಕರಿಸುತ್ತಾರೆ. ಇಂತಹವರು ಮೋಕ್ಷಸಾಧನೆಗಾಗಿ ಬುದ್ಧಿಯಿಂದ ತಿಳಿದ ಶಾಸ್ತ್ರದ ಅರಿವನ್ನುಂಟುಮಾಡಿಕೊಳ್ಳಲು ನಿರ್ಧರಿಸುತ್ತಾರೆ. ಏಕೆಂದರೆ,

ವೇದಾಂತಾನಂ ಅನೇಕತ್ವಾತ್ ಸಂಶಯಾನಾಂ ಬಹುತ್ವತಃ।
ವೇದಸ್ಯ ಅತಿ ಸೂಕ್ಷ್ಮತ್ವಾತ್ ನ ಜನಾತಿ ಗುರುಂ ವಿನಾ ॥

(ಅನುಭೂತಿಪ್ರಕಾಶ, ವಿದ್ಯಾರಣ್ಯ)

'ವೇದಾಂತದ ಸಂಶಯ ನಿವಾರಣೆ ಮತ್ತು ಸೂಕ್ಷ್ಮವಿದ್ಯೆ ಯನ್ನು ಅನುಭವ ಪಡೆದ ಜ್ಞಾನಿಯಿಂದಲೇ ಆಗುವುದೇ ಹೊರತು ಪಾಂಡಿತ್ಯದಿಂದಲ್ಲ.'

ಹೀಗೆ ಗುರಿಯನ್ನು ಮುಟ್ಟುವವರೆಗೂ ಜಿಜ್ಞಾಸುವು ಜೀವನ ಪರ್ಯಂತ ಗುರುವಿನಿಂದ ಜ್ಞಾನೋಪದೇಶವನ್ನು ಪಡೆಯುತ್ತಾ ಗುರುಶುಶ್ರೂಷೆಯನ್ನೂ ನಿರ್ವಹಿಸುತ್ತಾ ಆಜೀವನವನ್ನು ಕಳೆಯುತ್ತಾನೆ. ಗುರುವಿನ ಸಾಮಿಪ್ಯದ ರಸಾಸ್ವಾದವೇ ಅವನಿಗೆ ಅಮೃತವಾಗುತ್ತದೆ. ನಾವು ಇಂತಹ ಪರಮ ಶಿಷ್ಯರ ಅನನ್ಯ ಗುರುಭಕ್ತಿಯ ಉದಾಹರಣೆಯನ್ನು ಅನೇಕ ಸಲ ಕಂಡಿರುತ್ತೇವೆ. ಕೆಲವನ್ನಿಲ್ಲಿ ಪ್ರಾಸಂಗಿಕವಾಗಿ ಉದಾಹರಿಸಬಹುದು.

ಗುರುವಿನ ಆಜ್ಞೆಯನ್ನು ಹಿಂದೆ ಮುಂದೆ ನೋಡದೆ ಶಿರಸಾ ಪಾಲಿಸುವುದು ಸಹ ಗುರುಭಕ್ತಿ, ಗುರುವಿನ ಮಹಿಮೆಯ ಲ್ಲಿರುವ ವಿಶ್ವಾಸದ ಸಂಕೇತ. ಏಕಲವ್ಯನು ದ್ರೋಣನ ಉದ್ದೇಶದ ಹಿಂದಿರುವ ಮರ್ಮವನ್ನು ತಿಳಿಯಬಯಸದೆ ಒಡನೆಯೇ ಬಲಗೈಯ ಹೆಬ್ಬೆರಳನ್ನು ಕೊಯ್ದು ಅವನ ಪಾದದಲ್ಲಿಟ್ಟನು. ಗಂಗೆಯ ಇನ್ನೊಂದು ದಡದಿಂದ ಶಂಕರಾಚಾರ್ಯರು ಈಚೆ ದಡದಲ್ಲಿದ್ದ ಶಿಷ್ಯರನ್ನು ತಮ್ಮ ಬಳಿ ಬರಲು ಕೂಗಿ ಕರೆದಾಗ, ಅವರ ಶಿಷ್ಯ ಸನಂದನರು ಮರುಯೋಚಿಸದೇ ನದಿಯಲ್ಲಿ ಪಾದ ವನ್ನಿಟ್ಟರು. ಗಂಗೆಯು ಪ್ರಸನ್ನಳಾಗಿ ಅವರು ಪಾದವಿಟ್ಟ ಜಾಗ ದಲ್ಲಿ ಪದ್ಮಗಳನ್ನರಳಿಸಿ ಆಸರೆಯನ್ನು ಕಲ್ಪಿಸಿದಳು. ದಡ ಸೇರಿದ ಶಿಷ್ಯನನ್ನು ಶಂಕರರು ಸಂತೋಷದಿಂದ ಆಲಂಗಿಸಿ, ಅವನಿಗೆ 'ಪದ್ಮಪಾದ' ಎಂಬ ಹೊಸ ನಾಮವನ್ನಿತ್ತರು.

ಅನೇಕ ಗುರು : ಜೀವನದಲ್ಲಿ ನಾವು ಅನೇಕರಿಂದ ಪಾಠ ಕಲಿಯಬೇಕಾಗುತ್ತದೆ. ನಿಷ್ಕಾಮಕರ್ಮವೆಂಬ ಕರ್ಮಯೋಗ ಸಾಧನೆಯೂ ಜೀವನ್ಮುಕ್ತ ಸ್ಥಿತಿಗೆ ಒಯ್ಯುತ್ತದೆ. ಕೌಶಿಕನೆಂಬ ಬ್ರಾಹ್ಮಣನ ಕಥೆ ಮಹಾಭಾರತದಲ್ಲಿದೆ. ಅವನು ವೇದಪಾರಂ ಗತನೂ ತಪೋಧನನೂ ಆಗಿದ್ದನು. ಅವನು ಒಮ್ಮೆ ಮರದಡಿ ಯಲ್ಲಿ ಕುಳಿತಿದ್ದಾಗ ಆ ಮರದ ಮೇಲಿದ್ದ ಒಂದು ಕೊಕ್ಕರೆಯು ಅವನ ತಲೆಯ ಮೇಲೆ ಮಲವನ್ನು ವಿಸರ್ಜಿಸಿತು. ಅವನು ಅದನ್ನು ದುರದುರನೆ ನೋಡಿದಾಗ ಅದು ದಗ್ಧವಾಗಿ ಭೂಮಿ ಯಲ್ಲಿ ಬಿತ್ತು. ಭಿಕ್ಷೆಗಾಗಿ ಗ್ರಾಮಕ್ಕೆ ಹೋಗಿ ''ಭಿಕ್ಷಾಂದೇಹಿ'' ಎಂದು ಕೂಗಿದಾಗ ಮನೆಯಾಕೆ ಪತಿಯ ಸೇವೆಯಲ್ಲಿ ತೊಡಗಿ ದ್ದಳು. ಆಮೇಲೆ ಬಹು ವಿಳಂಬದಿಂದ ಬಂದ ಅವಳನ್ನು ಕೋಪ ದಿಂದ ಸುಡುವಂತೆ ದುರದುರನೆ ನೋಡುತ್ತಿರುವುದನ್ನು ಕಂಡು ಒಳಗೊಳಗೆ ನಗುತ್ತಾ ಆಕೆ ಹೇಳಿದಳು, ''ನನ್ನನ್ನು ಕಾಡಿನಲ್ಲಿರುವ ಕೊಕ್ಕರೆಯೆಂದು ಭಾವಿಸಬೇಡ.'' ಆಶ್ಚರ್ಯಚಕಿತನಾದ ಅವ ನಿಗೆ, ''ಪರೋಕ್ಷದಲ್ಲಿ ನಡೆದ ಈ ಸಂಗತಿಯನ್ನು ನಾನು ಹೇಗೆ ಬಲ್ಲೆನೆಂದು ಬಲ್ಲೆಯಾ? ಅದು ನನ್ನ ಪತಿ ಶುಶ್ರೂಷೆಯ ಪ್ರಭಾವ ವೆಂದು ತಿಳಿ'' ಎಂದಳು. ಹಾಗೆಯೇ ಮಿಥಿಲೆಯ ಧರ್ಮ ವ್ಯಾಧನೆಂಬ ಕಟುಕನ ಬಳಿಗೆ ಉತ್ತಮ ಧರ್ಮವನ್ನು ತಿಳಿಯಲು ಕಳುಹಿಸಿದಳು. ಅವನು ಮಾಂಸವನ್ನು ಮಾರುವ ಮಂಡಿಯಲ್ಲಿ ಅನೇಕ ಸಮಯ ಕಾಯಿಸಿದನು. ನಂತರ ತನ್ನ ಮನೆಗೆ ಹೋಗಿ ತನ್ನ ತಂದೆ-ತಾಯಿಯರ ಶುಶ್ರೂಷೆಯನ್ನು ಮಾಡಿದನು. ನಂತರ ''ಏನು ನೀನು ಭಿಕ್ಷೆಗಾಗಿ ಹೋದಾಗ ಆ ಪತಿವ್ರತೆಯು ನಿನ್ನನ್ನು ಕಳಿಸಿದಳೆ?'' ಎಂದು ಕೇಳಿದನು. ನಂತರ ಅವನ ಕಣ್ತೆರೆಸಿ ಜ್ಞಾನ ಬೋಧನೆಯನ್ನು ನೀಡಿದನು. ಇದೇ ಮಹಾಭಾರತದ ಪ್ರಸಿದ್ಧ ವಾದ ವ್ಯಾಧಗೀತಾ. ಗುರುವು ಹೇಳಿದ್ದು ಸರಿಯಾಗಿ ನಾಟಬೇಕಾ

ದಲ್ಲಿ ಅಹಂಕಾರ ದಮನದಿಂದ ಪಕ್ವವಾದ ಮನಸ್ಸು ಪಾತ್ರ ವಹಿಸುತ್ತದೆ.

ಉಪಮನ್ಯು - ಧೌಮ್ಯನ ಕಥೆ : ಮಹಾಭಾರತದಲ್ಲಿ ಅಯೋ ಧೌಮ್ಯ-ಉಪಮನ್ಯುವಿನ ಕಥೆ ಇದೆ. ಗುರುಭಕ್ತಿಯ ಪರಾಕಾಷ್ಠೆ ಯನ್ನೂ, ಅವನ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸುವ ಶಿಷ್ಯ ನನ್ನೂ ಇಲ್ಲಿ ಕಾಣಬಹುದು. ಉಪಮನ್ಯುವಿನ ಪಾಲಿಗೆ ಗುರು ಕುಲದಲ್ಲಿ ದಿನವೆಲ್ಲ ಕಾಡಿನಲ್ಲಿ ದನ ಮೇಯಿಸುವ ಕೆಲಸ. ಒಮ್ಮೆ ಪರೀಕ್ಷೆಗಾಗಿ ಆಶ್ರಮ ಭಂಡಾರದಲ್ಲಿ ಆಹಾರ ಸ್ವೀಕರಿಸದಂತೆ ಗುರು ಆಜ್ಞೆಯಿತ್ತನು. ಹಲವು ದಿನಗಳ ನಂತರ ಧೌಮ್ಯನು ''ಮಗು, ನೀನು ಆಶ್ರಮದಲ್ಲಿ ತಿನ್ನದಿದ್ದರೂ ದಷ್ಟ- ಪುಷ್ಟನಾಗಿ ರುವೆಯಲ್ಲ?'' ಎಂದು ಕೇಳಿದನು. ಅದಕ್ಕೆ ಅವನು ಗುರುವೆ, ''ನಾನು ಭಿಕ್ಷೆ ಬೇಡಿ ತಿನ್ನುವೆ''ನೆಂದು ತಿಳಿಸಿದಾಗ, ''ಇನ್ನು ಮೇಲೆ ಅದೆಲ್ಲವನ್ನೂ ನನಗೆ ಅರ್ಪಿಸು'' ಎಂದನು. ಕೆಲವು ದಿನ ಗಳ ನಂತರ ಮತ್ತೆ ಧೌಮ್ಯನು, ''ಈಗಲೂ ನೀನು ಹಾಗೆಯೇ ಇರುವೆಯಲ್ಲ?'' ಎಂದು ಕೇಳಿದಾಗ, ''ನಾನು ಗುರು ಅರ್ಪ ಣೆಯ ನಂತರ ಮತ್ತೆ ಭಿಕ್ಷೆ ಬೇಡಿ ತಿನ್ನುವೆ'' ಎಂದನು. ಆಗ ಧೌಮ್ಯನು, ''ಹಾಗೆ ಮಾಡಿದರೆ ಊರಿನವರಿಗೆ ಹೆಚ್ಚು ಹೊರೆ ಯಾಗುತ್ತದೆ'' ಎಂದನು. ಹೀಗೆ ಹಲವು ದಿನಗಳ ನಂತರವೂ ಉಪಮನ್ಯುವು ಚೆನ್ನಾಗಿಯೇ ಇರುವುದನ್ನು ಗಮನಿಸಿ, ''ನೀನು ಏನೂ ತಿನ್ನದೆಯೂ ದಷ್ಟ-ಪುಷ್ಟನಾಗಿರುವೆಯಲ್ಲ?'' ಎಂದು ಕೇಳಿದನು. ಆಗ ಅವನು, ತಾನು ಹಸುವಿನ ಹಾಲನ್ನು ಕುಡಿಯು ತ್ತಿರುವುದಾಗಿ ತಿಳಿಸಿದನು. ಅದಕ್ಕೆ ಧೌಮ್ಯನು ''ಮಗು, ಹಾಗೆ ಮಾಡಿದರೆ ಅವುಗಳ ಕರುವಿಗೆ ಸಲ್ಲಬೇಕಾದ ಪಾಲಿನಲ್ಲಿ ಕಡಿಮೆ ಯಾಗುವುದಿಲ್ಲವೆ?''ಎಂದು ಕೇಳಿದಾಗ ಉಪಮನ್ಯುವು ಹಾಲು ಕುಡಿಯುವುದನ್ನೂ ನಿಲ್ಲಿಸಿದನು. ಆದರೂ ತನ್ನ ಕಾರ್ಯ ಗಳನ್ನು ಮುಂದುವರಿಸುತ್ತಿರುವ ಉಪಮನ್ಯುವನ್ನು ಕರೆದು, 'ವತ್ಸ, ಈಗ ನೀನು ಭಿಕ್ಷೆ ಬೇಡುತ್ತಿಲ್ಲ , ಹಾಲೂ ಕುಡಿಯುತ್ತಿಲ್ಲ, ಆದರೂ ಗುಂಡಾಗಿಯೇ ಇರುವೆಯಲ್ಲಾ?'' ಎಂದಾಗ, ''ನಾನು ಕರುವು ಹಾಲು ಕುಡಿಯುವಾಗ ಅವುಗಳ ಬಾಯಿಯ ಕಟ ವಾಯಿಯಿಂದ ಬರುವ ಹಾಲು ನೊರೆಯನ್ನು ಕುಡಿಯುವೆ'' ಎಂದಾಗ, ಧೌಮ್ಯನು, ''ಆಗ ನಿನ್ನ ಈ ದೀನ ಅವಸ್ಥೆಯನ್ನು ನೋಡಿ ಕರುವು ಬೇಕಂತಲೇ ಹೆಚ್ಚು ಹಾಲನ್ನು ಹೊರಹಾಕಿ ಕಡಿಮೆ ಹಾಲನ್ನು ಹೊಟ್ಟೆಗೆ ಸೇರಿಸಿಕೊಳ್ಳಬಹುದು'' ಎಂದನು.

ಗುರುವಿನ ಈ ಮಾತಿನ ನಂತರ ಉಪಮನ್ಯನು ಏನೂ ಸೇವಿಸದೇ ಇದ್ದುಬಿಟ್ಟನು. ಹಲವು ದಿನಗಳ ನಂತರ ಹಸಿವು ತಾಳ ಲಾರದೆ ಎಕ್ಕದೆಲೆಯ ಹಾಲನ್ನು ಕುಡಿದುಬಿಟ್ಟನು. ಇದರಿಂದ ಕಣ್ಣು ಕಳೆದುಕೊಂಡು ಒಂದು ನೀರಿಲ್ಲದ ಹಾಳು ಬಾವಿಗೆ ಬಿದ್ದು ಬಿಟ್ಟನು. ಮುಸ್ಸಂಜೆಯಾದರೂ ಬಾರದಿರುವ ಶಿಷ್ಯನ ಬಗ್ಗೆ ಧೌಮ್ಯನು ಕಾತರದಿಂದ ವಿಚಾರಿಸಲಾಗಿ, ದನ ಮೇಯಿಸಿಕೊಂಡು ಬಂದಿಲ್ಲವೆಂದು ತಿಳಿದು, ಧೌಮ್ಯನು ಹಲವು ಶಿಷ್ಯರೊಡಗೂಡಿ ಕಾಡಿನಲ್ಲಿ 'ಉಪಮನ್ಯು', 'ಉಪಮನ್ಯು' ಎಂದು ಕೂಗುತ್ತಾ ಇರುವಾಗ ದೂರದ ಪಾಳುಬಾವಿಯಿಂದ ''ನಾನಿಲ್ಲಿದ್ದೇನೆ ಗುರು ಗಳೇ'' ಎಂಬ ಧ್ವನಿ ಬಂದಿತು. ಅವನು ನಡೆದದ್ದೆಲ್ಲವನ್ನೂ ವಿವರಿಸಿದನು. ಆಗ ಧೌಮ್ಯನು, ''ನೀನು ಅಶ್ವಿನೀ ದೇವತೆ ಗಳನ್ನು ಪ್ರಾರ್ಥಿಸು'' ಎಂದು ತಿಳಿಸಿದನು. ಅವನು ಹಾಗೆಯೇ ಮಾಡಲಾಗಿ ಅಶ್ವಿನೀ ದೇವತೆಗಳು ಪ್ರತ್ಯಕ್ಷರಾಗಿ ದಿವ್ಯೌಷಧವನ್ನು ಸೇವಿಸುವಂತೆ ತಿಳಿಸಿದರು. ಆಗ ಉಪಮನ್ಯು ಅವರಿಗೆ, ''ಗುರು ವಿನ ಅಪ್ಪಣೆ ಇಲ್ಲದೆ ನಾನು ಸೇವಿಸುವುದಿಲ್ಲ'' ಎಂದು ತಿಳಿಸಿ ಬಿಟ್ಟನು. ಆಗ ಅಶ್ವಿನೀ ದೇವತೆಗಳು ಇಂತಹ ಸಂದರ್ಭದಲ್ಲಿ ಅವನ ಗುರುವೂ ಸಹ ಅವನ ಗುರುವಿನ ಅಪ್ಪಣೆ ಇಲ್ಲದೆ ಸ್ವೀಕರಿಸಿದ್ದನ್ನು ತಿಳಿಸಿದರು. ಆದರೂ ಉಪಮನ್ಯುವು ಹಾಗೆ ಮಾಡಲು ಒಪ್ಪಲಿಲ್ಲ. ಆಗ ಗುರುವು ಒಡನೆಯೇ, ''ಮಗು, ಅವರು ನೀಡಿದ್ದನ್ನು ಸ್ವೀಕರಿಸಲು ನನ್ನ ಅನುಮತಿ ಇದೆ'' ಎಂದು ಕೂಗಿದನು. ಅದನ್ನು ಸೇವಿಸಿದ ನಂತರ ಅವನಿಗೆ ಕಣ್ಣು ಬಂದಿತು. ಉಪಮನ್ಯುವು ಒಡನೆಯೇ ಓಡಿ ಹೋಗಿ ಗುರುವಿನ ಪಾದಕ್ಕೆರಗಿದನು. ಧೌಮ್ಯನು ಅವನಿಗೆ ವೇದ ಸ್ಮರಣೆಯು ಪುನಃ ಬರುವಂತೆ ಮಾಡಿ, ವೇದ, ವೇದಾಂತಗಳಲ್ಲಿ ಪಾರಂಗತನಾಗು ವಂತೆ ಆಶೀರ್ವದಿಸಿದನು. ಅಶ್ವಿನೀದೇವತೆಗಳು, ''ನಿನ್ನ ಗುರು ವಿನ ಹಲ್ಲುಗಳು ಉಕ್ಕಿನದ್ದಾಗಿ, ನಿನ್ನ ಹಲ್ಲುಗಳು ಬಂಗಾರ ದ್ದಾಗಲಿ. ನೀನು ಎಲ್ಲ ಸುಖ-ಸಮೃದ್ಧಿಯನ್ನೂ ಹೊಂದುವೆ'' ಎಂದು ಸಂತೋಷದಿಂದ ಹರಸಿದರು.

ನರೇಂದ್ರನ ಗುರುಭಕ್ತಿ : ನರೇಂದ್ರನ ಗುರುಭಕ್ತಿಗೂ ಮುಂದೆ ವಿವೇಕಾನಂದರಾಗಿ ಗುರುವಿನ ಅವತಾರ ಕಾರ್ಯಕ್ಕೆ ಮಾಡಿದ ಆತ್ಮಾರ್ಪಣ ಬುದ್ಧಿಗೂ ದ್ಯೋತಕವಾದ ಒಂದು ಪ್ರಸಂಗ ನಡೆ ಯಿತು. ಕಾಶೀಪುರದಲ್ಲಿ ಶ್ರೀರಾಮಕೃಷ್ಣರಿಗೆ ಕ್ಯಾನ್ಸರ್ ರೋಗಕ್ಕೆ ಶುಶ್ರೂಷೆಯ ವ್ಯವಸ್ಥೆಯಾಗಿದೆ. ಒಮ್ಮೆ ಭಕ್ತಮಂಡಲಿಯಲ್ಲಿ ಇದ್ದಕ್ಕಿದಂತೆ, ಶ್ರೀರಾಮಕೃಷ್ಣರ ವ್ಯಾಧಿ ಸಾಂಕ್ರಾಮಿಕವಾದದ್ದು ಎಂಬ ವದಂತಿಯೊಂದು ಹೇಗೋ ಏನೋ ಹುಟ್ಟಿಕೊಂಡಿತು. ಈ ವದಂತಿಯ ಪರಿಣಾಮ ಶ್ರೀರಾಮಕೃಷ್ಣರ ಖಾಯಿಲೆ ನಮಗೇ ಅಂಟಿಕೊಂಡರೇ ಎಂದು ಅವರ ಸೇವೆಗೆ ಭಕ್ತರು ಹೆದರಿ ಹಿಂಜ ರಿಯತೊಡಗಿದರು. ಇದನ್ನು ತಿಳಿದ ನರೇಂದ್ರ ವ್ಯಗ್ರನಾದ. ತಡಮಾಡದೆ ತನ್ನ ಜೊತೆಗಾರರನ್ನೆಲ್ಲಾ ಕರೆದುಕೊಂಡು ಶ್ರೀರಾಮ ಕೃಷ್ಣರ ಕೋಣೆಗೆ ಧಾವಿಸಿದ. ಅಲ್ಲಿ ಶ್ರೀರಾಮಕೃಷ್ಣರು ಸೇವಿಸಿ ಮಿಕ್ಕಿದ್ದ ಹಾಗೂ ಅವರ ಎಂಜಲು ಬೆರೆತಿದ್ದ ಗಂಜಿಯು ಬಟ್ಟಲ ಲ್ಲಿತ್ತು. ನರೇಂದ್ರ ಒಂದು ಮಾತನ್ನೂ ಆಡದೆ ಅದನ್ನೆತ್ತಿ ಗಟ ಗಟನೆ ಕುಡಿದುಬಿಟ್ಟ. ಅದನ್ನು ಕಂಡವರೆಲ್ಲ ಸ್ತಂಭೀಭೂತ ರಾದರು, ಪಶ್ಚಾತ್ತಾಪದಿಂದ ತಲೆ ತಗ್ಗಿಸಿದರು.

ಹೀಗೆ ಗುರುಕೃಪೆ ಮತ್ತು ಗುರುಭಕ್ತಿಯ ಆವಶ್ಯಕತೆ, ಇದರ ಹಿಂದಿನ ವೈಜ್ಞಾನಿಕ ಕಾರಣ ಹಾಗೂ ಗುರುಭಕ್ತರ ಮಹಿಮೆಯನ್ನು ಗುರುಪೂರ್ಣಿಮೆಯಂದು ಸ್ಮರಿಸುತ್ತಾ ಕೃತಾರ್ಥರಾಗೋಣ. ❖